# ಶ್ರೀ ಸುತ್ತೂರು ಮಠ

## ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 279

**12 ಮೇ 2025 * ಸೋಮವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ವಯೊಲಿನ್ ತ್ರಯ



ವಿದ್ವಾನ್ ಡಾ. ಮೈಸೂರು ಎಂ. ಮಂಜುನಾಥ್
ವಿದ್ವಾನ್ ಸುಮಂತ್ ಮಂಜುನಾಥ್
ಕುಮಾರಿ ಮಾಳವಿ ಮಂಜುನಾಥ್



ಮೃದಂಗ
ವಿದ್ವಾನ್ ನೈವೇಲಿ ವೆಂಕಟೇಶ್



ಘಟಂ
ವಿದ್ವಾನ್ ವಾಳಪಲ್ಲಿ ಆರ್. ಕೃಷ್ಣಕುಮಾರ್

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ವಿದ್ವಾನ್ ಡಾ. ಮೈಸೂರು ಎಂ. ಮಂಜುನಾಥ್**ರವರು ವಯೊಲಿನ್ ವಾದನದ ಮೂಲಕ ಜಗತ್ತಿನಾದ್ಯಂತ ಮನ್ನಣೆ ಗಳಿಸಿದ್ದಾರೆ. ತಂದೆ ವಿದ್ವಾನ್ ಶ್ರೀ ಎಸ್. ಮಹದೇವಪ್ಪನವರ ಬಳಿ ಶಿಕ್ಷಣ ಪಡೆದು ಎಂಟನೆಯ ವಯಸ್ಸಿನಲ್ಲೇ ಕಾರ್ಯಕ್ರಮ ನೀಡಿದ ಬಾಲಪ್ರತಿಭೆ. ಲಂಡನ್ನಿನ ಪ್ರತಿಷ್ಠಿತ ರಾಯಲ್ ಆಲ್ಬರ್ಟ್ ಹಾಲ್, ಆಸ್ಟ್ರೇಲಿಯಾದ ಸಿಡ್ನಿ ಅಪೇರಾ ಹೌಸ್ ಮುಂತಾದ 55ಕ್ಕೂ ಹೆಚ್ಚು ವಿದೇಶಿ ವೇದಿಕೆಗಳಲ್ಲಿ ಭಾರತೀಯ ಸಂಗೀತಸುಧೆಯನ್ನು ಹರಿಸಿದ್ದಾರೆ. ಸಿತಾರ್ ಮಾಂತ್ರಿಕ ಪಂ. ರವಿಶಂಕರ್‌ರವರು ಅಮೆರಿಕದಲ್ಲಿ ಇವರ ವಾದನವನ್ನು ಕೇಳಿ 'ಮೈಸೂರಿನ ರಾಜಕುಮಾರ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಲಾಸ್ ಎಂಜಲೀಸ್‌ನ 'ಟೈಮ್ಸ್' ಪತ್ರಿಕೆಯು ಇವರನ್ನು 'ಎಲ್ಲಾ ಎಲ್ಲೆಗಳನ್ನೂ ಮೀರಿ ಬೆಳೆದ ಸಂಗೀತದ ಅದ್ಭುತ' ಎಂದು ಕರೆದಿದೆ. ಅಮೆರಿಕ, ಇಟಲಿ, ಇರಾನ್ ಮುಂತಾದ ವಿಶ್ವ ವಯೊಲಿನ್ ಸಮ್ಮೇಳನಗಳಿಗೆ ಆಮಂತ್ರಿತರಾದ ಪ್ರಪ್ರಥಮ ಭಾರತೀಯ ವಿದ್ವಾಂಸರು. ಭಾರತ ಸರ್ಕಾರದ ಸಾಂಸ್ಕೃತಿಕ ರಾಯಭಾರಿಯಾಗಿ ಹಲವಾರು ದೇಶಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಇವರನ್ನು ಕುರಿತ ಡಾಕ್ಯುಮೆಂಟರಿ ಹಾಗೂ ಸಂದರ್ಶನಗಳನ್ನು ವಿದೇಶಿ ವಾಹಿನಿಗಳು ಪ್ರಸಾರ ಮಾಡಿವೆ. ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ, ಆಸ್ಟ್ರೇಲಿಯಾದ ಗ್ರಿಫಿತ್ ವಿಶ್ವವಿದ್ಯಾನಿಲಯಗಳು ಸೇರಿದಂತೆ 35ಕ್ಕೂ ಹೆಚ್ಚು ವಿದೇಶಿ ವಿಶ್ವವಿದ್ಯಾನಿಲಯಗಳು ಇವರ ಕಾರ್ಯಕ್ರಮಗಳನ್ನು ಆಯೋಜಿಸಿವೆ. ಪ್ರಸ್ತುತ ಇವರು ಸಂಸ್ಕಾರ ಭಾರತಿಯ ರಾಷ್ಟ್ರೀಯ ಅಧ್ಯಕ್ಷರಾಗಿದ್ದಾರೆ. ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಚೌಡಯ್ಯ ರಾಷ್ಟ್ರೀಯ ಪ್ರಶಸ್ತಿ, ಸಂಗೀತ ಸಾಮ್ರಾಟ್, ಸಂಗೀತ ರತ್ನ, ಸಂಗೀತ ವಿದ್ವನ್ಮಣಿ, ಸಂಗೀತ ಚೂಡಾಮಣಿ ಮೊದಲಾದ ಹಲವಾರು ಪ್ರಶಸ್ತಿಗಳಿಗೆ ಭಾಜನರು. ಇವರು ಜೆಎಸ್‌ಎಸ್ ಸಂಸ್ಥೆಯ ಹಿರಿಯ ವಿದ್ಯಾರ್ಥಿ ಎಂಬುದು ಹೆಮ್ಮೆಯ ವಿಚಾರ.

**ವಿದ್ವಾನ್ ಸುಮಂತ್ ಮಂಜುನಾಥ್‌ರವರು** ಕರ್ನಾಟಕದ ಪ್ರತಿಭಾವಂತ ಯುವ ವಯೊಲಿನ್ ವಾದಕರಲ್ಲಿ ಒಬ್ಬರು. ತಾತ ವಿದ್ವಾನ್ ಎಸ್. ಮಹದೇವಪ್ಪನವರು, ದೊಡ್ಡಪ್ಪ ವಿದ್ವಾನ್ ಮೈಸೂರು ಎಂ. ನಾಗರಾಜ್, ತಂದೆ ಡಾ. ಮೈಸೂರು ಎಂ. ಮಂಜುನಾಥ್ ಅವರುಗಳಿಂದ ಶಿಕ್ಷಣ ಪಡೆದಿದ್ದು ದೇಶದ ಪ್ರತಿಷ್ಠಿತ ವೇದಿಕೆಗಳಲ್ಲದೆ, ವಿದೇಶಗಳಲ್ಲಿಯೂ ವಯೊಲಿನ್ ವಾದನ ಪ್ರಸ್ತುತಿ ಪಡಿಸುತ್ತಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ಎಂ.ಮ್ಯೂಸಿಕ್‌ನಲ್ಲಿ ಚಿನ್ನದ ಪದಕಗಳನ್ನು ಗಳಿಸಿದ್ದಾರೆ. ಆಕ್ಸ್‌ಫರ್ಡ್, ಕೇಂಬ್ರಿಜ್, ನೆದರ್‌ಲ್ಯಾಂಡ್, ಶ್ರೀಲಂಕಾದ ಜಾಫ್ನಾ ವಿಶ್ವವಿದ್ಯಾನಿಲಯಗಳಲ್ಲಿ ಪ್ರಾತ್ಯಕ್ಷಿಕೆ ಹಾಗೂ ಕಾರ್ಯಾಗಾರಗಳನ್ನು ನಡೆಸಿಕೊಟ್ಟಿದ್ದಾರೆ. ನೆದರ್‌ಲೆಂಡ್‌ನ ಐತಿಹಾಸಿಕ

ಡೊಮಿನಿಕನ್ ಚರ್ಚ್, ಲಂಡನ್ನಿನ ಭಾರತೀಯ ವಿದ್ಯಾ ಭವನ, ಫ್ರಾನ್ಸ್‌ನ ಲಿಲ್ ವಿಶ್ವವಿದ್ಯಾನಿಲಯ ಹಾಗೂ ವಿಶ್ವಸಂಸ್ಥೆಯ ಯುಎನ್‌ಓ ಥಿಯೇಟರ್‌ನಲ್ಲಿ ಇವರು ನೀಡಿದ ಕಾರ್ಯಕ್ರಮಗಳು ಅಲ್ಲಿನ ಜನರನ್ನು ಮಂತ್ರಮುಗ್ಧರನ್ನಾಗಿಸಿವೆ. ಮುಂಬೈನ ಖ್ಯಾತ ಷಣ್ಮುಖಾನಂದ ಸಭಾ ನೀಡುವ ಪ್ರತಿಷ್ಠಿತ ಎಂ.ಎಸ್. ಸುಬ್ಬಲಕ್ಷ್ಮಿ ಪುರಸ್ಕಾರಕ್ಕೆ ಭಾಜನರಾಗಿದ್ದಾರೆ. ಕಳೆದ ಗಣರಾಜ್ಯೋತ್ಸವ ಸಮಯದಂದು ಘನತೆವೆತ್ತ ರಾಷ್ಟ್ರಪತಿ ಹಾಗೂ ಪ್ರಧಾನ ಮಂತ್ರಿಗಳ ಸಮಕ್ಷಮ ರಾಷ್ಟ್ರಪತಿ ಭವನದಲ್ಲಿ ವಿಶೇಷ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟಿದ್ದಾರೆ.

**ಕುಮಾರಿ ಮಾಳವಿ ಮಂಜುನಾಥ್‌ರವರು** ವಿದ್ವಾನ್ ಡಾ. ಮೈಸೂರು ಎಂ. ಮಂಜುನಾಥ್‌ರವರ ಸುಪುತ್ರಿ. ಸಂಗೀತದ ಕೌಟುಂಬಿಕ ಹಿನ್ನೆಲೆಯಿಂದ ಬಂದಿರುವ ಇವರು ಆ ಭವ್ಯ ಪರಂಪರೆಯ ಸಮರ್ಥ ವಾರಸುದಾರರಾಗಿದ್ದಾರೆ. ಕಿರಿಯ ವಯಸ್ಸಿನಲ್ಲಿಯೇ ಅಪಾರ ಸಾಧನೆ ಮಾಡುತ್ತಿರುವ ಅಪೂರ್ವ ಕಲಾವಿದರು. ಶ್ರೀಲಂಕಾದಲ್ಲಿರುವ ಭಾರತೀಯ ರಾಯಭಾರಿ ಕಛೇರಿ ಆಯೋಜಿಸಿದ್ದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಆಹ್ವಾನಿತರಾಗಿ ಕಾರ್ಯಕ್ರಮ ನೀಡಿದ್ದಾರೆ. ಜಾಫ್ನಾ ಕಲ್ಚರಲ್ ಸೆಂಟರ್ ಉದ್ಘಾಟನೆಯ ಸಂದರ್ಭದಲ್ಲಿ ಪ್ರಧಾನಿಗಳಾದ ಶ್ರೀ ನರೇಂದ್ರ ಮೋದಿಯವರ ಸಮ್ಮುಖದಲ್ಲಿ ವಯೊಲಿನ್ ವಾದನ ಪ್ರಸ್ತುತಿಪಡಿಸಿದ್ದಾರೆ. ನೇಪಾಳದ ತ್ರಿಭುವನ್ ವಿಶ್ವವಿದ್ಯಾನಿಲಯದಲ್ಲೂ ಕಾರ್ಯಕ್ರಮ ನೀಡಿದ್ದಾರೆ. ಅದ್ಭುತ ಪ್ರತಿಭೆ, ಮಧುರ ನುಡಿಸಾಣಿಕೆಗಳ ಸಂಗಮವಾದ ಇವರು ಜೈಪುರ ಸಂಗೀತೋತ್ಸವಕ್ಕೆ ಆಹ್ವಾನಿತರಾದ ಅತ್ಯಂತ ಕಿರಿಯ ಕಲಾವಿದೆಯೆಂಬ ಖ್ಯಾತಿ ಪಡೆದಿದ್ದಾರೆ.

**ವಿದ್ವಾನ್ ನೈವೇಲಿ ವೆಂಕಟೇಶ್‌ರವರು** ವಿದ್ವಾಂಸರುಗಳಾದ ರಾಮನಾಥಪುರಂ ಎಂ.ಎಸ್. ಕಂದಸಾಮಿ ಪಿಳ್ಳೈ, ಪೆರುಂಪಲ್ಲಿ ವೆಂಕಟೇಶನ್ ಮತ್ತು ತಿರುನಾಗೇಶ್ವರಂ ಸುಬ್ರಹ್ಮಣ್ಯಂ ಅವರ ಬಳಿ ಶಿಷ್ಯವೃತ್ತಿ ಮಾಡಿದ್ದಾರೆ. ಖಂಜಿರ ವಾದನದಲ್ಲಿಯೂ ಎತ್ತಿದ ಕೈ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಹಲವಾರು ಸಂಗೀತಗಾರರಿಗೆ ಮೃದಂಗದ ಸಾಥ್ ನೀಡಿದ್ದಾರೆ. ತನಿ ಆವರ್ತನದಲ್ಲಿ ಶಾಸ್ತ್ರೀಯ ಲೆಕ್ಕಾಚಾರಕ್ಕಿಂತಲೂ ನಾದಮಾಧುರ್ಯಕ್ಕೆ ಇವರ ಪ್ರಾಶಸ್ತ್ಯ. ವಿದ್ವಾನ್ ಸಂಜಯ್ ಸುಬ್ರಹ್ಮಣ್ಯರವರ ಒಡನಾಟ ಇವರ ವಿದ್ವತ್ತಿನ ಅನಾವರಣಕ್ಕೆ ಹೊಸ ಅವಕಾಶ ಕಲ್ಪಿಸಿದೆ. ವಾಣೀಕಲಾ ಸುಧಾಕರ, ನಾದವಲ್ಲಭ ಮತ್ತು ಕಾರ್ತಿಕ್ ಫೈನ್ ಆರ್ಟ್ಸ್ ನೀಡುವ ಅವಾರ್ಡ್ ಆಫ್ ಎಕ್ಸೆಲೆನ್ಸ್ ಇವರಿಗೆ ಲಭಿಸಿರುವ ಪ್ರಮುಖ ಪ್ರಶಸ್ತಿಗಳು.

ವಿದ್ವಾನ್ ವಾಳಪಲ್ಲಿ ಆರ್. ಕೃಷ್ಣಕುಮಾರ್‌ರವರು ಘಟಂ ವಿದ್ವಾಂಸರುಗಳಾದ ವಾಳಪಲ್ಲಿ ಚೆಲ್ಲಪ್ಪನ್, ಚೇರ್ತಾಲ ಜಯದೇವ್, ಲಯವಾದ್ಯ ಶಿರೋಮಣಿ ಡಾ. ಸುರೇಶ್ ವೈದ್ಯನಾಥನ್‌ರವರ ಬಳಿ ಶಿಷ್ಯವೃತ್ತಿ ಮಾಡಿದ್ದಾರೆ. ತ್ರಿವೇಂಡ್ರಂ ಆಕಾಶವಾಣಿಯ "ಎ" ಶ್ರೇಣಿ ಕಲಾವಿದರು. ಮದ್ರಾಸ್ ಮ್ಯೂಸಿಕ್ ಅಕ್ಯಾಡೆಮಿಯಲ್ಲಿ ಪ್ರತಿ ವರ್ಷವೂ ಸಂಗೀತ ಕಚೇರಿಗಳಿಗೆ ಆಹ್ವಾನಿತರಾಗುವ ಇವರು ಹಲವಾರು ಬಾರಿ ವಿದೇಶ ಪ್ರವಾಸ ಮಾಡಿದ್ದಾರೆ. "ಮೋದಂ ಮೋಹನ ಘಟನಾದಂ" ಎಂಬ ವಿಶೇಷ ಲಯವಿನ್ಯಾಸವನ್ನು ರೂಪಿಸಿ ತುರವೂರು ತಿರುಮಲ ದೇವಸ್ವಂ, ನರಸಿಂಹಸ್ವಾಮಿ ದೇವಸ್ಥಾನ, ತಿರುಪತಿ ನೀರಾಜನಂ ಮುಂತಾದ ಪ್ರತಿಷ್ಠಿತ ವೇದಿಕೆಗಳಲ್ಲಿ ಪ್ರಸ್ತುತಿಪಡಿಸಿದ್ದಾರೆ.

## ಬೆಳದಿಂಗಳ ಸಂಗೀತ 280

**11 ಜೂನ್ 2025**

**ಗಾಯನ**

**ವಿದುಷಿ ಡಾ. ರಂಜನಿ ವಾಸುಕಿ**

**ವಯೊಲಿನ್**

**ವಿದ್ವಾನ್ ಜಿ. ವೆಂಕಟೇಶ್ ಜೋಸ್ಯರ್**

**ಮೃದಂಗ**

**ವಿದ್ವಾನ್ ಫಣೀಂದ್ರ ಭಾಸ್ಕರ**

ಫೋನ್: 0821–2548221, 2548223 * ಇಮೇಲ್: sutturmath@jssonline.org